(6ನೇ ಪುಟದಿಂದ)

ಹೊಂದಿದ್ದರೆ, ಇವುಗಳದು ಚೌಕಾಕಾರದ ಪೆಟ್ಟಿಗೆಯಂತಹ ದೇಹ. ಕಿವಿರುಗಳ ಮೂಲಕ ಉಸಿರಾಡುತ್ತವೆ. ಕಿವಿರುಗಳು ತೇವಾಂಶವನ್ನು ಹೊಂದಿರುವುದು ಉಸಿರಾಟಕ್ಕೆ ಅಗತ್ಯ. ಈ ತೇವಾಂಶವನ್ನು ಹೊಂದುವ ಕಾರಣದಿಂದಾಗಿ 'ದೆವ್ವದ ಏಡಿಗಳು' ಆಗಾಗ ಸಮುದ್ರದ ನೀರಿನಲ್ಲಿ ಮುಳುಗೇಳುತ್ತಿರುತ್ತವೆ.



## ಪಾಪ್ ಅಪ್ ಕಣ್ಣುಗಳು!

ದೆವ್ವದ ಏಡಿಗಳ ಮತ್ತೊಂದು ವಿಶೇಷ ವೆಂದರೆ ಅವುಗಳ ಪಾಪ್ ಅಪ್ ಕಣ್ಣುಗಳು! ಹಾತೆ, ಚಿಟ್ಟೆ, ದುಂಬಿ.. ಯಾವುದೇ ಕೀಟದ ಕಣ್ಣಿನ ಸಂಯೋಜನೆ ವಿಶಿಷ್ಟವಾಗಿರುತ್ತದೆ. ಜೇಡಗಳಂತೂ ತಲೆಯ ಮೇಲೆ ಸಾಲಾಗಿ ಎಂಟು ಕಣ್ಣುಗಳನ್ನು ಹೊಂದಿರುವ ಅದ್ಭುತ ಕೀಟಗಳು. ಈ 'ದೆವ್ವ ಏಡಿ'ಯ ಕಣ್ಣುಗಳೂ ವಿಶಿಷ್ಟವಾದವು.

ಮೊಬೈಲ್ ಕಂಪೆನಿಗಳು ತಮ್ಮ ಗ್ರಾಹಕರಿಗೆ 'ಹೊಸತು' ನೀಡುವ ಭರಾಟೆಯಲ್ಲಿ ಮೊಬೈಲಿನ ಪೂರ್ಣ ಪರದೆಯನ್ನು ಉಪಯೋಗಿಸುತ್ತಿವೆಯಷ್ಟೇ! ಇಂಥ ಸಂದರ್ಭದಲ್ಲಿ ಮೊಬೈಲಿನೊಳಗಿನಿಂದ ಎದ್ದು ಹೊರಗೆ ಬರುವ ಪಾಪ್ ಅಪ್ ಕ್ಯಾಮೆರಾ ಕಣ್ಣನ್ನು ಬಳಸಲಾಗುತ್ತದೆ. ನಿಸರ್ಗದ ಅದ್ಭುತವನ್ನು ನೋಡಿ: ಕೋಟ್ಯಂತರ ವರ್ಷಗಳ ನಿರಂತರ ಜೈವಿಕ ವಿಕಾಸದ ಪ್ರಕ್ರಿಯೆಯಲ್ಲಿ ಈ ಏಡಿಗೆ ಯಾವಾಗಲೋ ಪಾಪ್ ಅಪ್ ಕಣ್ಣು ದೊರೆತಿದೆ.

ಸಾಮಾನ್ಯವಾಗಿ ಏಡಿಗಳು ಕಣ್ಣನ್ನು ಸ್ವಲ್ಪ ಮಟ್ಟಿಗೆ ಹೊರಚಾಚಬಲ್ಲವು. ಈ ದೆವ್ವದ ಏಡಿಯ ಕಣ್ಣಂತೂ ನಿಜಕ್ಕೂ ಅದ್ಭುತ ಪಾಪ್ ಅಪ್ ಕಣ್ಣೇ! ನೀರೊಳಗಿದ್ದಾಗ ಅಥವಾ ಮರಳಿನ ಬಿಲದಲ್ಲಿ ಹುದುಗಿಕೊಂಡಿದ್ದಾಗ ತನ್ನ ಕುಳಿಯೊಳಗೆ ಸದ್ದಿಲ್ಲದೆ ಅಡಗಿಕೊಳ್ಳುವ ಕಣ್ಣುಗಳು ಅಗತ್ಯವಿದ್ದಾಗ ಹೊರಬಂದು ಉದ್ದಕ್ಕೆ ದೇಹದ ಮೇಲ್ಭಾಗಕ್ಕೆ ಚಾಚಿಕೊಳ್ಳುತ್ತವೆ. ನೀರೊಳಗೆ ಅಡಗಿದ್ದಾಗಲೂ ಕಣ್ಣಿರುವ ಕೊಂಬನ್ನು ಮೇಲೆತ್ತಿ ಜಗತ್ತನ್ನು ನೋಡಬಲ್ಲವು. ಆಹಾರ ಅಥವಾ ಶತ್ರುವನ್ನು ಗಮನಿಸಲು ಇದು ತನ್ನ ಅಪರೂಪದ ಕಣ್ಣನ್ನು ಹಿಂದೆ ಮುಂದೆ ತಿರುಗಿಸಬಲ್ಲದು. ಕೆಲವು ಸಂಶೋಧಕರ ಅಧ್ಯಯನದ ಪ್ರಕಾರ, ಇದು ತನ್ನ ಕಣ್ಣನ್ನು ಸಂಪೂರ್ಣ ಹಿಂದಕ್ಕೆ ತಿರುಗಿಸುವ ಸಾಮರ್ಥ್ಯವನ್ನೂ ಹೊಂದಿದೆ.



ಬಹುತೇಕ ಕಡಲಜೀವಿಗಳು ರುಚಿಕರ ಖಾದ್ಯಗಳ ಪಟ್ಟಿಯಲ್ಲಿವೆ. ಏಡಿ, ಮಾಂಸಾಹಾರಿಗಳ ಫೇವರಿಟ್. ಆದರೆ, ದೆವ್ವದ ಏಡಿಗಳು ತಿನ್ನಲು ಯೋಗ್ಯ ಎಂದು ಯಾರೂ ಪರಿಗಣಿಸಿಲ್ಲ. ಆದ್ದರಿಂದಲೇ ಇವು ವಿನಾಶದ ಅಂಚಿನಲ್ಲಿರುವ ಜೀವಿಗಳ ಸಾಲಿಗೆ ಸೇರಿಲ್ಲ. ಕಡಲ ತೀರಗಳಲ್ಲಿ ವಾಸಿಸುವ ಇವು ಜನರ ಕಾಲತುಳಿತಕ್ಕೆ ಸಿಲುಕಿ ಸಾಯುತ್ತಿರುತ್ತವೆ. ವಿಷಯುಕ್ತ ತ್ಯಾಜ್ಯಗಳು ಸಮುದ್ರದ ಒಡಲು ಸೇರುವುದು ಕೂಡ ಇವುಗಳ ಸಾವಿಗೆ ಕಾರಣವಾಗುತ್ತದೆ.

ಭಾರತವೂ ಸೇರಿದಂತೆ ಏಷ್ಯಾದ ಬಹುತೇಕ ಸಮುದ್ರ ತೀರಗಳಲ್ಲಿ ದೆವ್ವದ ಏಡಿಗಳು ಇರುಳಿನಲ್ಲಿ ಕಾಣಿಸುತ್ತವೆ. ಬೆಳದಿಂಗಳ ರಾತ್ರಿ ಬೀಚ್‌ನಲ್ಲಿ ವಾಯುವಿಹಾರದಲ್ಲಿದ್ದಾಗ ಗಮನವಿಟ್ಟು ನೋಡಿದರೆ ಇವುಗಳ ದರ್ಶನವಾಗಬಹುದು. ದೃಷ್ಟಿ ಸೂಕ್ಷ್ಮವಾಗಿದ್ದಲ್ಲಿ ಹಗಲಿನಲ್ಲಿಯೂ ಕಣ್ಣಿಗೆ ಬೀಳಬಹುದು.